ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು

ಸಿ.ಸಿ. ನಂಃ **236/2024**

| | | |
|---|---|---|
| ಪಿರ್ಯಾದಿ | ಃ | ಶ್ರೀ ಬಿ.ಎ. ವೆಂಕಟೇಶ್<br>ಃಬಿನ್ಃ ಅಪ್ಪುಸ್ವಾಮಿ<br>**40** ವರ್ಷ, ಹಳೇ ಹೊಸನಗರ ಬಡಾವಣೆ,<br>ಬೇಲೂರು ಟೌನ್,<br>ಬೇಲೂರು ತಾಲ್ಲೂಕು. ಹಾಸನ ಜಿಲ್ಲೆ. |
| | | ವಿರುದ್ಧ |
| ಆರೋಪಿ | ಃ | ಶ್ರೀ ಎಂ.ಜಿ. ಸುನೀಲ್ ಕುಮಾರ್<br>ಃಬಿನ್ಃ ಗೋಪಾಲಗೌಡ,<br>**38** ವರ್ಷ, ನಿಡಗೋಡು ಗ್ರಾಮ,<br>ಜನ್ನಾಪುರ ಅಂಚೆ, ಗೋಣಿಬೀಡು ಹೋಬಳಿ,<br>ಮೂಡಿಗೆರೆ ತಾಲ್ಲೂಕು,<br>ಚಿಕ್ಕಮಗಳೂರು ಜಿಲ್ಲೆ. |

## ಃ ಆರೋಪಣೆಯ ಸಾರಾಂಶ ಃ

ಪಿರ್ಯಾದಿ ಮತ್ತು ಆರೋಪಿಯಾದ ನೀನು ತುಂಬಾ ವಿಶ್ವಾಸಿಗಳಾಗಿದ್ದು, ಆರೋಪಿಯಾದ ನೀನು ದಿನಾಂಕಃ 10.03.2022 ರಂದು ಪಿರ್ಯಾದಿ ಮನೆಗೆ ಬಂದು ತನ್ನ ಸಂಸಾರಕ್ಕಾಗಿ ಮಾಡಿರುವ ಕೈಸಾಲ ತೀರುವಳಿಗಾಗಿ ತುರ್ತಾಗಿ ರೂ.4,60,000/– ರೂಪಾಯಿಗಳು ಬೇಕಾಗಿದೆ ಸಾಲ ಕೊಡಿ, ಇನ್ನು 8 ತಿಂಗಳಲ್ಲಿ ವಾಪಸ್ ಕೊಡುತ್ತೇನೆಂದು ಕೇಳಿದ್ದು, ಪಿರ್ಯಾದಿಯು ಆರೋಪಿಯಾದ ನಿನ್ನ ಕೋರಿಕೆಯನ್ನು ಮನ್ನಿಸಿ ಅಂದೇ ಪಿರ್ಯಾದುದಾರನ ಬಾಂಕಿನಿಂದ ರೂ.3,00,000/–ಗಳನ್ನು ಪಡೆದುಕೊಂಡು ಮತ್ತು ಪಿರ್ಯಾದುದಾರನ ಹತ್ತಿರ ಇದ್ದ ರೂ.1,60,000/– ಗಳನ್ನು ಒಟ್ಟು ರೂ.4,60,000/–ಗಳನ್ನು ಸಾಲವಾಗಿ ಆರೋಪಿಯಾದ ನಿನಗೆ ನೀಡಿರುತ್ತಾರೆ. ಪಿರ್ಯಾದುದಾರರು ಆರೋಪಿಯಾದ ನೀನು ಹಣ ಪಡೆದುಕೊಂಡ 8 ತಿಂಗಳು ಕಳೆದ ನಂತರ ಪಿರ್ಯಾದುದಾರರು ಆರೋಪಿಯನ್ನು ಹಲವಾರು ಬಾರಿ ಬೇಟಿಯಾಗಿ ಸದರಿ ಸಾಲದ ಹಣವನ್ನು ಕೇಳುತ್ತಿದ್ದು, ನಂತರ ದಿನಾಂಕಃ 09.01.2024 ರಂದು ಆರೋಪಿಯಾದ ನೀನು ಪಿರ್ಯಾದುದಾರರಿಂದ ಪಡೆದ ಹಣವನ್ನು

ಪಿರ್ಯಾದುದಾರರು ಮುಂದಿನ ದಿನಾಂಕದಲ್ಲಿ ಹೊಂದುವಂತೆ ಆರೋಪಿಯಾದ ನೀನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್, ಮೂಡಿಗೆರೆ ಶಾಖೆಯ ಚೆಕ್ ನಂ:014884 ರಲ್ಲಿ ರೂ.4,60,000/–ಗಳನ್ನು ನಮೂದಿಸಿ ದಿನಾಂಕ: 07.02.2024 ರಂದು ಅಥವಾ ನಂತರ ಮೇಲ್ಕಂಡ ಬ್ಯಾಂಕಿಗೆ ಹಾಜರಿಸಿ ಹಣ ಪಡೆದುಕೊಳ್ಳುವಂತೆ ತಿಳಿಸಿ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ. ನಂತರ ಪಿರ್ಯಾದುದಾರನು ಸದರಿ ಚೆಕ್‌ನ್ನು ನಗದೀಕರಿಸುವ ಉದ್ದೇಶದಿಂದ ಪಿರ್ಯಾದಿ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಬೇಲೂರು ಶಾಖೆಯ ಮೂಲಕ ಹಾಜರಿಸಲಾಗಿ ಪಿರ್ಯಾದಿ ಬ್ಯಾಂಕಿನವರು ಆರೋಪಿಯಾದ ನಿನ್ನ ಖಾತೆಯನ್ನು ಪರಿಶೀಲಿಸಿದಾಗ, ಆರೋಪಿಯಾದ ನೀನು ಕೊಟ್ಟ ಚೆಕ್ ನಗದಾಗದೇ **“Funds Insufficient”** ಎಂಬ ಹಿಂಬರಹದೊಂದಿಗೆ ಚೆಕ್ ಮತ್ತು ಹಿಂಬರಹವನ್ನು ಪಿರ್ಯಾದಿಗೆ ವಾಪಸ್ಸು ನೀಡಿರುತ್ತಾರೆ. ಆನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ: 01.03.2024 ರಂದು ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ನೋಟಿಸ್‌ನ್ನು ಆರೋಪಿಯಾದ ನನಗೆ ಜಾರಿ ಮಾಡಿದ್ದು, ಸದರಿ ನೋಟೀಸ್‌ನ್ನು ಆರೋಪಿಯಾದ ನಿನಗೆ ದಿನಾಂಕ: 09.03.2024 ರಂದು ಜಾರಿಯಾದರೂ ಸಹ ಆರೋಪಿಯಾದ ನೀನು ಇದೂವರೆಗೂ ಯಾವುದೇ ಉತ್ತರವನ್ನಾಗಲೀ, ಹಣವನ್ನಾಗಲೀ ಪಿರ್ಯಾದುದಾರನಿಗೆ ನೀಡಿರುವುದಿಲ್ಲ. ಆರೋಪಿಯಾದ ನೀನು ನಿನ್ನ ಖಾತೆಯಲ್ಲಿ ಚೆಕ್ ಹಣವನ್ನು ಮಾನ್ಯ ಮಾಡುವಷ್ಟು ಹಣವಿಲ್ಲದಿದ್ದರೂ ಪಿರ್ಯಾದಿಗೆ ಚೆಕ್ ಅನ್ನು ನೀಡಿ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಮೋಸ ಮಾಡುವ ಉದ್ದೇಶದಿಂದ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

ಪ್ರಶ್ನೆ: ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?

ಉತ್ತರ:

ಪ್ರಶ್ನೆ: ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ:

(ಆಪಾಧಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ)

ಸ್ಥಳ: ಬೇಲೂರು
ದಿನಾಂಕ: **26.03.2025**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು